

# ಸಂಕ್ರಾಂತಿಗೆ ಚಿಕನ್‌ಕಾರಿ ಉಡುಪು

ಸಂಕ್ರಾಂತಿ ಹಬ್ಬ ಸಂಭ್ರಮಿಸಲು ಸಾಂಪ್ರದಾಯಿಕ ಲುಕ್ ನೀಡುವ ಚಿಕನ್‌ಕಾರಿ ಉಡುಗೆಗಳು ಸೂಕ್ತ. ಕುಟುಂಬದ ಸದಸ್ಯರೆಲ್ಲರೂ ಒಂದೇ ರೀತಿಯ ಉಡುಗೆ ತೊಟ್ಟು ಹಬ್ಬವನ್ನು ವಿಭಿನ್ನವಾಗಿ ಆಚರಿಸಬಹುದು.

■ ಯು. ಅನಂತ್

ಸುಗ್ಗಿ ಹಬ್ಬವಾದ ಸಂಕ್ರಾಂತಿಗೆ ಸಾಂಪ್ರದಾಯಿಕ ಉಡುಗೆಯೇ ಸರಿ. ವರ್ಷದ ಮೊದಲ ಹಬ್ಬ, ಅದೂ ಸೂರ್ಯನ ಹಬ್ಬ, ಪ್ರಕೃತಿಯ ಹಬ್ಬಕ್ಕೆ ಟ್ರೆಡಿಷನಲ್ ಲುಕ್ ನೀಡುವ ಉಡುಗೆಗಳೇ ಆಗಬೇಕು. ಚಿಕನ್‌ಕಾರಿ ಉಡುಗೆಗಳು ಸಂಕ್ರಾಂತಿ ಹಬ್ಬಕ್ಕಾಗಿಯೇ ವಿಶೇಷವಾಗಿ ರೂಪಿಸಿದಂಥವು. ಪುಟ್ಟ ಹುಡುಗಿಯರಿಂದ ಹಿಡಿದು ವಯಸ್ಸಾದವರವರೆಗೆ ಎಲ್ಲರೂ ಈ ಉಡುಪನ್ನು ಧರಿಸಿ ಸಂಭ್ರಮಿಸಬಹುದು.

ಪುಟ್ಟ ಪೋರಿಯರು ಲಂಗ ದಾವಣಿ, ಬಣ್ಣ ಬಣ್ಣದ ಫ್ರಾಕ್, ಉದ್ದ ಲಂಗ ಹಾಕಿ ಹಬ್ಬದ ಸಡಗರದಲ್ಲಿ ತೇಲಾಡಬಹುದು. ಯುವತಿಯರು ಲೆಹೆಂಗಾ, ಹಾಫ್ ಸೀರೆ, ಇಳಕಲ್, ಕಾಟನ್ ಸಿಲ್ಕ್ ಸೀರೆ... ಇವೇ ಮುಂತಾದ ಸಾಂಪ್ರದಾಯಿಕ ಉಡುಗೆಗಳ ಥರಾವರಿ ವಿನ್ಯಾಸದಲ್ಲಿ ಉಡುಪಿನಲ್ಲಿ ಕಂಗೊಳಿಸಬಹುದು. ಇಂಥ ಟ್ರೆಡಿಷನಲ್ ಉಡುಗೆಯಲ್ಲಿ ಸಖತ್ ಆಗಿ ಮಿಂಚುವ ಮಕ್ಕಳು–ಮಹಿಳೆಯರು ಎಳ್ಳು–ಬೆಲ್ಲ ಬೀರುವ ಸಂಭ್ರಮ ಈಗೀಗ ಫ್ಯಾಷನ್‌ಗೆ ಹೊಸ ಆಯಾಮವನ್ನೇ ನೀಡಿದೆ.

ಸಂಕ್ರಾಂತಿ ಹಬ್ಬಕ್ಕೆ ಚಿಕನ್‌ಕಾರಿ ಉಡುಗೆಯೂ ವಿಭಿನ್ನ ಲುಕ್ ಕೊಡುತ್ತದೆ. ಕುಟುಂಬದ ಸದಸ್ಯರೆಲ್ಲರೂ ಒಂದೇ ರೀತಿಯ ಉಡುಗೆ ತೊಟ್ಟು ಸಂಭ್ರಮಿಸಲು ಚಿಕನ್‌ಕಾರಿ ಉಡುಗೆ ಅತ್ಯಂತ ಸೂಕ್ತ, ಅದರಲ್ಲೂ ಮಲ್ಟಿಕಲರ್ ಪಾಲಿ ಸಿಲ್ಕ್ ಸೆಟ್ ಜೊತೆಗೆ ಹ್ಯಾಂಡ್ ಎಂಬ್ರಾಯಿಡರಿ ಮಾಡಿದಂಥವು ಚೆನ್ನ. ವೆಲ್ವೆಟ್ ಚಿಕನ್‌ಕಾರಿ ಕುರ್ತಾ ಸೆಟ್ ಪುರುಷ ಹಾಗೂ ಮಹಿಳೆಯರಿಬ್ಬರಿಗೂ ಒಂದೇ ತೆರನಾದ ವಿನ್ಯಾಸದಲ್ಲಿ ಲಭ್ಯ. ಇದು ಎಥ್ನಿಕ್ ಲುಕ್ ಕೊಡುವುದಲ್ಲದೆ 'ಮೇಡ್ ಫಾರ್ ಈಚ್ ಅದರ್' ಪರಿಕಲ್ಪನೆಗೆ ಸರಿಹೊಂದುವಂಥವು. ಈ ವಿನ್ಯಾಸದಲ್ಲಿ ಸಿದ್ಧಪಡಿಸಿದ ಉಡುಗೆಗಳು ಸಂಕ್ರಾಂತಿ ಹಬ್ಬಕ್ಕಾಗಿಯೇ ಹೇಳಿಮಾಡಿಸಿದಂಥವು.

ಹಬ್ಬದ ಸಂಭ್ರಮ ಮತ್ತಷ್ಟು ಕಳೆಕಟ್ಟಲು ಅಪ್ಪಟ ರೇಷ್ಮೆಯಲ್ಲಿ ಸಿದ್ಧಪಡಿಸಿದ ಚಿಕನ್‌ಕಾರಿ ಕುರ್ತಾ ಸೆಟ್ ಸಹಕಾರಿ. ಚಿಕನ್‌ಕಾರಿ ಪಾರ್ಟಿವೇರ್ ಉಡುಪು ಸಹ ಹಬ್ಬಕ್ಕಾಗಿಯೇ ಟ್ರೆಂಡಿಂಗ್‌ನಲ್ಲಿದೆ. ಧರಿಸಿಕೊಳ್ಳಲು ಆರಾಮದಾಯಕ, ನೋಡಲು ಆಕರ್ಷಕವಾಗಿರುವ ಇಂಥ ಡ್ರೆಸ್ ಎಲ್ಲ ವಯೋಮಾನದವರನ್ನೂ ಸೆಳೆಯುವಂಥವು. ಇದರೊಂದಿಗೆ ಜುಮ್ಕಾ, ನೆಕ್ಲೇಸ್ ಹಾಗೂ ಬಳೆಗಳನ್ನು ಮಹಿಳೆಯರು ಬಳಸಿದರೆ, ಪುರುಷರು ಕುರ್ತಾ ಸೆಟ್ ಧರಿಸಿದಾಗ ಬ್ರೇಸ್ಲೆಟ್, ಉಂಗುರ ಧರಿಸಿ ಪರಿಪೂರ್ಣವಾಗಿ ವಿಜೃಂಭಿಸಬಹುದು. ಚಿಕನ್‌ಕಾರಿಯಲ್ಲಿ ಚಂದೇರಿ ಸಿಲ್ಕ್ ಸೀರೆ ಸಾಂಪ್ರದಾಯಿಕ ಹಾಗೂ ಗ್ರ್ಯಾಂಡ್ ಲುಕ್ ಕೊಡುತ್ತದೆ. ಹಬ್ಬಕ್ಕಾಗಿಯೇ ಮಾರುಕಟ್ಟೆಗೆ ಬಂದಿರುವ ಚಂದೇರಿ ಸಿಲ್ಕ್ ಸೀರೆ ಮಹಿಳೆಯರ ಅಚ್ಚುಮೆಚ್ಚಿನ ಉಡುಗೆಯೂ ಆಗಿದೆ.

## ರಿಯಾಯಿತಿ ಸುಗ್ಗಿ

ಸಂಕ್ರಾಂತಿ ಹಬ್ಬಕ್ಕೆ ಅಗತ್ಯವಿರುವ ಸಾಂಪ್ರದಾಯಿಕ ಉಡುಗೆಗಳಿಗೆ ಈಗಾಗಲೇ ಮಹಿಳೆಯರು ಮುಗಿಬಿದ್ದಿದ್ದಾರೆ. ಹೀಗಾಗಿ ಫ್ಯಾಷನ್ ಮಳಿಗೆಗಳು, ಸೀರೆ ಅಂಗಡಿಗಳು ರಿಯಾಯಿತಿ ದರದಲ್ಲಿ ಉಡುಗೆ–ತೊಡುಗೆ ನೀಡಲು ಪೈಪೋಟಿ ನಡೆಸಿವೆ. ಸೀರೆಗಳಿಗೆ, ಇತರ ಉಡುಗೆಗಳಿಗೆ ರಿಯಾಯಿತಿ ಘೋಷಿಸಿ ಗ್ರಾಹಕರನ್ನು ಸೆಳೆಯುವ ತಂತ್ರವೂ ನಡೆಯುತ್ತಿದೆ. ಇದಕ್ಕಾಗಿ ಮಾಲ್‌ಗಳು, ಶೋರೂಂಗಳು ಭರ್ಜರಿಯಾಗಿ ಆಫರ್‌ಗಳನ್ನು ನೀಡುತ್ತಿವೆ. ಜೊತೆಗೆ ಲಕ್ಕಿ ಡ್ರಾ, ಗಿಫ್ಟ್ ವೋಚರ್ ಮುಂತಾದ ಕೊಡುಗೆಗಳನ್ನೂ ನೀಡುವ ಮೂಲಕ ತಮ್ಮ ವ್ಯಾಪಾರ ಹೆಚ್ಚಿಸುವ ಇರಾದೆಯಲ್ಲಿ ವರ್ತಕರು ತೊಡಗಿದ್ದಾರೆ. ಸೀರೆಗಳಿಗೆ, ಉಡುಗೆಗಳಿಗೆ ಆಕರ್ಷಕ ರಿಯಾಯಿತಿ ಸಿಗುವುದೆಂಬ ಆಸೆಗೆ ಮಹಿಳೆಯರೂ ಈಡಾಗಿದ್ದಾರೆ.

ಸಂಕ್ರಾಂತಿ ಸಡಗರಕ್ಕೆ ಊಟ ತಿಂಡಿ, ಅಡುಗೆ, ಒಡವೆಯಷ್ಟೇ ಉಡುಗೆಗೂ ಪ್ರಾಶಸ್ತ್ಯವಿದೆ. ಹ್ಯಾಪಿ ಸಂಕ್ರಾಂತಿ...! ■